**ಪ್ರಮಾಣೀಕರಿಸಲಾದ ದಿನಾಂಕ : 06.01.2026.**

**<u>ಮುಂದುವರೆದ ಪಾಟೀ ಸವಾಲು : ಶ್ರೀ. B.D.J ವಕೀಲರಿಂದ</u> :-**

ನಾನು ಈ ಅರ್ಜಿಯಲ್ಲಿ ತಂಟೆ ಮಾಡಿದ ಕಾರಣ ತಕರಾರನ್ನು ಸಲ್ಲಿಸಿರುತ್ತೇನೆ. ಈ ಅರ್ಜಿಯ ಎದುರುದಾರರು ನನಗೆ ತಂಟೆ ತಕರಾರು ಮಾಡಿದ ಕಾರಣ ಈ ತಕರಾರನ್ನು ಸಲ್ಲಿಸಿರುತ್ತೇನೆ. ನನ್ನ ನಿವೇಶನದ ಸಂಖ್ಯೆಯು - 30 ಆಗಿರುತ್ತದೆ. ಅದರ ಚೆಕ್ಕುಬಂದಿಯು ಪೂರ್ವಕ್ಕೆ - 9 ಮೀಟರ್ ರಸ್ತೆ, ಪಶ್ಚಿಮಕ್ಕೆ - ಖಾಸಗಿ ಜಮೀನು, ಉತ್ತರಕ್ಕೆ - 31ನೇ ನಿವೇಶನ, ದಕ್ಷಿಣಕ್ಕೆ - 29 ನೇ ನಿವೇಶನ ಬರುತ್ತದೆ. ಈ ಅರ್ಜಿಯ ನಿವೇಶನವು ಯಾವ ಸಂಖ್ಯೆಯೊಳಗೆ ಬರುತ್ತದೆ ಎಂಬುದು ನನಗೆ ಗೊತ್ತಿಲ್ಲ. ನಾನು ನನ್ನ ನಿವೇಶನವನ್ನು ಮುನ್ಸೂರ್ ಆಲ್ತಾಫ್ ಎಂಬುವರಿಂದ ಖರೀದಿ ಮಾಡಿರುತ್ತೇನೆ. ಸದರಿ ಆಸ್ತಿಯು ಮುನ್ಸೂರ್ ಆಲ್ತಾಫ್ ರವರಿಗೆ ಜಿ.ಪಿ.ಎ ಮುಖಾಂತರ ಬಂದಿರುತ್ತದೆ. ಸದರಿ ಜಿ.ಪಿ.ಎ ಯನ್ನು ಈ ಅರ್ಜಿಯ ಎದುರುದಾರರಾದ ವೀರರಾಜುರವರು ಮಾಡಿಕೊಟ್ಟಿರುತ್ತಾರೆ. ನಾನು ಸದರಿ ಜಿ.ಪಿ.ಎ ಆಧಾರದ ಮೇಲೆ ಮುನ್ಸೂರ್ ಆಲ್ತಾಫ್ ರವರು ನಿವೇಶನವನ್ನು ಮಾಡಿದ ನಂತರ ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡಿದಂತಹ ಸಮಯದಲ್ಲಿ ಸದರಿ ಜಿ.ಪಿ.ಎ cancel ಆಗಿರಲಿಲ್ಲ. ಈ ಅರ್ಜಿಯ ಆಸ್ತಿಯ ಮೇಲೆ ನ್ಯಾಯಾಲಯದಲ್ಲಿ ಯಾವುದಾದರೂ ದಾವೆ ಇತ್ತಾ ಇಲ್ಲವೋ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಅದೇ ರೀತಿ ಎದುರುದಾರರು ಅರ್ಜಿದಾರರಿಗೆ ಒಂದು ಕರಾರು ಪತ್ರವನ್ನು ಬರೆದು ಕೊಟ್ಟ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಅದೇ ರೀತಿ ಅರ್ಜಿದಾರರು ಎದುರುದಾರರ ಮೇಲೆ ದಾವೆಯನ್ನು ಹೂಡಿ ಅದು ಅವರ ಪರವಾಗಿ ಡಿಕ್ರಿಗೊಂಡ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ನನ್ನ ನಿವೇಶನವನ್ನು ಖರೀದಿ ಮಾಡುವ ಮುನ್ನ ಯಾವುದೇ ರೀತಿಯ ಪ್ರಕಟಣೆಯನ್ನು ನೀಡಿರಲಿಲ್ಲ. ಎದುರುದಾರರು ಮುನ್ಸೂರ್ ಆಲ್ತಾಫ್ ರವರಿಗೆ ಬರೆದು ಕೊಟ್ಟಿರುವ ಜಿ.ಪಿ.ಎ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಸದರಿ ಜಿ.ಪಿ.ಎ ಪ್ರತಿ ಇಲ್ಲ ಎಂದರೆ ಸಾಕ್ಷಿಯು ನಾನು ಓದಿರುವ ರಿಜಿಸ್ಟರ್ ಪತ್ರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಎದುರುದಾರರು ಮುನ್ಸೂರ್ ಆಲ್ತಾಫ್ ರವರಿಗೆ ಯಾವುದೇ ರೀತಿಯ ಜಿ.ಪಿ.ಎ ಯನ್ನು ಬರೆದು ಕೊಟ್ಟಿಲ್ಲದ ಕಾರಣ ಅದನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮುನ್ಸೂರ್ ಆಲ್ತಾಫ್ ರವರು ನಿವೇಶನವನ್ನು ನನಗೆ ಮಾರಾಟ ಮಾಡಲು ನನಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಈ ಅರ್ಜಿಯ ಆಸ್ತಿಗಳ ಚೆಕ್ಕುಬಂದಿಯ ಒಳಗೆ ನನ್ನ ನಿವೇಶನ ಬರುತ್ತದೆ. ಸದರಿ ಚೆಕ್ಕುಬಂದಿ ಒಳಗೆ ನನ್ನ ನಿವೇಶನ ಬರುತ್ತದೆ ಎಂದು ತೋರಿಸುವುದಕ್ಕೆ ಕ್ರಯಪತ್ರವನ್ನು ಹೊರತುಪಡಿಸಿ ಬೇರೆ ಯಾವ ದಾಖಲಾತಿಯೂ

ನನ್ನ ಬಳಿ ಇಲ್ಲ. ಸದರಿ ಆಸ್ತಿಯು ಅರ್ಜಿದಾರರ ಪರವಾಗಿ ಡಿಕ್ರಿಗೊಂಡಿದ್ದು ಅದು ಅವರ ಸ್ವಾಧೀನಾನುಭವದಲ್ಲೇ ಇರುತ್ತದ ಎಂದರೆ ಸರಿಯಲ್ಲ. ಅದೇ ರೀತಿ ಈ ಅರ್ಜಿಯ ದಾವಾ ಆಸ್ತಿಗಳ ವಿಸ್ತೀರ್ಣ 10 ಗುಂಟೆ ಹಾಗೂ 6 ಗುಂಟೆ ಒಳಗೆ ನನ್ನ ನಿವೇಶನ ಯಾವುದರಲ್ಲಿ ಬರುತ್ತದೆ ಎಂದು ಹೇಳಲು ನನಗೆ ಸಾಧ್ಯವಿಲ್ಲ. ನಾನು 2011 ನೇ ಇಸವಿಯಲ್ಲಿ ನನ್ನ ನಿವೇಶನವನ್ನು ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡುವಷ್ಟರಲ್ಲಿ ಅರ್ಜಿದಾರರು ಈ ದಾವೆಯನ್ನು ಹೂಡಿ ಅವರ ಪರವಾಗಿ ಡಿಕ್ರಿಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ಎಲ್ಲಾ ಮಾಹಿತಿ ಇದ್ದರೂ ಮುನ್ಸೂರ್ ಆಲ್ತಾಫ್ ರವರಿಂದ ಸುಳ್ಳು ಕ್ರಯಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ತೊಂದರೆ ಕೊಡುವ ಉದ್ಧೇಶದಿಂದ ಈ ಸುಳ್ಳು ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿರುವ 10 ಗುಂಟೆ ಹಾಗೂ 6 ಗುಂಟೆ ಆಸ್ತಿಗಳ ಒಳಗೆ ನಾನು ಎಂದಿಗೂ ಸ್ವಾಧೀನಾನುಭವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಆಸ್ತಿಯು ಅರ್ಜಿಯ ಚೆಕ್ಕುಬಂದಿಯೊಳಗೆ ಎಲ್ಲಿ ಇದೆ ಎಂದು ತಿಳಿದುಕೊಳ್ಳದೇ ಇದ್ದರೂ ತಕರಾರನ್ನು ಸಲ್ಲಿಸಿ ಈ ಅರ್ಜಿಯನ್ನು ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ : ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**
**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**